# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 6 (04) |
| ಸದಸ್ಯರ ಹೆಸರು | ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | 09.12.2024. |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಳಗಾವಿಯ ಹಿರೇಬಾಗೇವಾಡಿ ಹತ್ತಿರ ಮಲ್ಲಪ್ಪನ ಗುಡ್ಡದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಕಟ್ಟಡದ ಮತ್ತು ಕಟ್ಟಡಗಳ ಸಂಖ್ಯೆ ಎಷ್ಟು: ನಿರ್ಮಾಣದ ಒಟ್ಟು ವೆಚ್ಚ ಎಷ್ಟು: (ವಿವರ ನೀಡುವುದು) | ಬೆಳಗಾವಿಯ ಹಿರೇಬಾಗೇವಾಡಿ ಹತ್ತಿರ ಮಲ್ಲಪ್ಪನ ಗುಡ್ಡದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಕಟ್ಟಡದ ಕಾಮಗಾರಿಯ ಅಂದಾಜು ಮೊತ್ತ ರೂ.110.00ಕೋಟಿಗಳಿಗೆ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಭರಿಸುವ ಷರತ್ತಿಗೊಳಪಟ್ಟು ಸರ್ಕಾರದ ಆದೇಶ ಸಂಖ್ಯೆ: ಇಡಿ 26 ಹೆಚ್‌ಪಿಯು 2021, ದಿನಾಂಕ: 01.07.2021ರನ್ವಯ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಒಟ್ಟು ಹತ್ತು ಕಟ್ಟಡಗಳ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿದೆ. |
| (ಆ) | ವಿಶ್ವವಿದ್ಯಾಲಯದ ನೂತನ ಕಟ್ಟಡಗಳನ್ನು ಪರಿಶೀಲಿಸಿದಾಗ ತೀರಾ ಕಳಪೆ, ಜಂಗು ಕಟ್ಟಿದ ಕಬ್ಬಿಣ, ಸಮತಟವಲ್ಲದ ಸಿಮೆಂಟ್ ಇಟ್ಟಿಗೆಗಳು, ಇನ್ನಿತರ ಸಾಮಗ್ರಿಗಳನ್ನು ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ; | ಬಂದಿರುವುದಿಲ್ಲ.<br><br>ಬೆಳಗಾವಿ ತಾಲೂಕಿನ ಹಿರೇಬಾಗೇವಾಡಿಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ನಿರ್ಮಾಣ ಕಾಮಗಾರಿಯ ಗುಣಮಟ್ಟದ ನಿಗಾವಹಿಸುವ ಉದ್ದೇಶದಿಂದ ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನೀಯರಿಂಗ್ ಘಟಕ, ಬೆಂಗಳೂರು ಇವರಿಂದ ಕಟ್ಟಡ ಕಾಮಗಾರಿಯನ್ನು ಅನುಷ್ಠಾನಗೊಳಿಸಲು M/s Infra Support Engineering consultants Pvt Ltd, Bangalore ಇವರನ್ನು ಯೋಜನಾ ನಿರ್ವಹಣೆ ಸಲಹೆಗಾರ ಎಜೆನ್ಸಿಯನ್ನಾಗಿ (Project Management Consultancy) ನಿಯೋಜಿಸಲಾಗಿದೆ.<br><br>ಸದರಿ ಏಜೆನ್ಸಿಯವರು ಕಾಮಗಾರಿಯನ್ನು ಹಾಗೂ ಕಾಮಗಾರಿಯಲ್ಲಿ ಉಪಯೋಗಿಸಲಾಗುವ ಸಾಮಗ್ರಿಗಳ ಗುಣಮಟ್ಟವನ್ನು ಪ್ರತಿ ಹಂತದಲ್ಲಿ ಕಾಲಕಾಲಕ್ಕೆ ನಿಯಮಿತವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತಿದ್ದಾರೆ ಹಾಗೂ ವಿಶ್ವವಿದ್ಯಾಲಯದ ಇಂಜನೀಯರಿಂಗ್ ವಿಭಾಗದಿಂದ ಕಾಲಕಾಲಕ್ಕೆ ಅಗತ್ಯಾನುಸಾರ ಗುಣಮಟ್ಟದ ಸಾಮಗ್ರಿಗಳನ್ನು ಬಳಸುತ್ತಿರುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |
| (ಇ) | ನಿರ್ಮಾಣ ಹಂತದಲ್ಲಿಯೇ ಕಟ್ಟಡಗಳು ಸೋರುತ್ತಿರುವುದು, ವೈಜ್ಞಾನಿಕವಲ್ಲದ ಕಟ್ಟಡಗಳ ರಚನೆ, ತೀರಾ ಕಳಪೆ ಮಟ್ಟದ ಕಾಮಗಾರಿ ನಡೆದಿರುವುದು ಇದಕ್ಕೆ ಯಾವ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ; | ನಿರ್ಮಾಣ ಹಂತದಲ್ಲಿನ ಕಟ್ಟಡದಲ್ಲಿ ಎಕ್ಸ್‌ಪಾನ್ಸನ್ ಜಾಯಿಂಟ್ ಇದ್ದು, ಎಕ್ಸ್‌ಪಾನ್ಸನ್ ಜಾಯಿಂಟ್ ಟ್ರೀಟ್‌ಮೆಂಟ್ ಕೆಲಸವನ್ನು ಇನ್ನೂ ಮಾಡದೇ ಇರುವುದರಿಂದ ನೀರಿನ ಸೋರಿಕೆ ಇದ್ದು, ತಾಂತ್ರಿಕವಾಗಿ ಎಕ್ಸಪಾನ್ಸನ್ ಜಾಯಿಂಟ್ ಟ್ರೀಟ್‌ಮೆಂಟ್ ಪೂರ್ಣಗೊಳಿಸಿದ ನಂತರ ಯಾವುದೇ ನೀರಿನ ಸೋರಿಕೆ ಇಲ್ಲದಂತೆ ಕ್ರಮವಹಿಸುತ್ತಿರುವ ಬಗ್ಗೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ ಇವರು ನಿಗಾವಹಿಸುತ್ತಿದ್ದಾರೆ ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಇಂಜನೀಯರಿಂಗ್ ವಿಭಾಗದಿಂದಲೂ ಕಾಲಕಾಲಕ್ಕೆ ಕಟ್ಟಡ ಕಾಮಗಾರಿಯ ಪ್ರಗತಿಯ ಬಗ್ಗೆ ನಿಯಮಿತವಾಗಿ ಮೇಲುಸ್ತುವಾರಿ ಮಾಡಲಾಗುತ್ತಿದೆ. |

| | | |
|---|---|---|
| (ಈ) | ವಿಶ್ವವಿದ್ಯಾಲಯದ ಹಣದಿಂದ ನಿರ್ಮಾಣವಾಗುತ್ತಿರುವ ಕಟ್ಟಡಗಳು ಅವೈಜ್ಞಾನಿಕವಾಗಿ ನಿರ್ಮಾಣ ಆಗಿರುವುದರಿಂದ, ವಿದ್ಯಾರ್ಥಿಗಳ ಮತ್ತು ಆ ಪ್ರದೇಶದ ಜನರ ಭವಿಷ್ಯದೊಂದಿಗೆ ಚೆಲ್ಲಾಟವಾಡಿದಂತೆ ಅನಿಸುವುದಿಲ್ಲವೆ; | ಪ್ರಥಮದಲ್ಲಿ ಕಟ್ಟಡದ ಕಾಮಗಾರಿಯ ಕನ್ಸಲ್ಟೆನ್ಸಿ ಕಾರ್ಯವನ್ನು CADD FORUM, Mysore ಇವರು ನಿರ್ವಹಿಸುತ್ತಿದ್ದರು. ಸದರಿ ಏಜೆನ್ಸಿಯವರು ನೀಡಿರುವ ವಿನ್ಯಾಸದಲ್ಲಿ ಲೋಪದೋಷಗಳಿದ್ದರಿಂದ ಸದರಿಯವರ ಕರಾರು ಒಪ್ಪಂದವನ್ನು ಮೊಟಕುಗೊಳಿಸಿ ನಂತರದಲ್ಲಿ GIRISH.M.SWAMY, BENGALURU ಇವರಿಗೆ ಟೆಂಡರ್ ಮುಖಾಂತರ ಕನ್ಸಲ್ಟನ್ಸಿ ಆದೇಶವನ್ನು ನೀಡಲಾಗಿದೆ.<br><br>ಕಾಮಗಾರಿಯಲ್ಲಿ ಯಾವುದೇ ಲೋಪ ಆಗದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ ಇವರು ಕ್ರಮವಹಿಸುತ್ತಿದ್ದಾರೆ ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಇಂಜನೀಯರಿಂಗ್ ವಿಬಾಗದಿಂದಲೂ ಕಾಲ ಕಾಲಕ್ಕೆ ಕಟ್ಟಡ ಕಾಮಗಾರಿಯ ಪ್ರಗತಿಯ ಬಗ್ಗೆ ಪರಿವೀಕ್ಷಣೆ ಮಾಡಿ ಕಾಮಗಾರಿಯ ಗುಣಮಟ್ಟದ ಬಗ್ಗೆ ನಿಗಾವಹಿಸಲಾಗುತ್ತಿದೆ. |
| (ಉ) | ಈ ಕಳಪೆ ಕಾಮಗಾರಿಯನ್ನು ತಡೆದು ಗುಣಮಟ್ಟದ ಮತ್ತು ದೀರ್ಘಾವಧಿಗೆ ಬಳಕೆಯಾಗುವಂತ ಕಟ್ಟಡಗಳನ್ನು ನಿರ್ಮಿಸಲು ಕ್ರಮ ಕೈಗೊಂಡು, ಕಳಪೆ ಕಾಮಗಾರಿ ಕುರಿತು ತನಿಖೆ ನಡೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | |

ಸಂಖ್ಯೆ: ಇಡಿ 140 ಹೆಚ್‌ಪಿಯು 2024)

(ಡಾ: ಎಂ.ಸಿ.ಸುಧಾಕರ್)
ಉನ್ನತ ಶಿಕ್ಷಣ ಸಚಿವರು.